## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗಾಗಿ ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್ ಸೇವೆಗೆ ಎಮ್‌ಪ್ಯಾನಲ್(Empanel) ಮಾಡುವ ಬಗ್ಗೆ.

**ಓದಲಾಗಿದೆ:** ದಿನಾಂಕ: 07.11.2013 ರಂದು ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳ ರೀತ್ಯ.

**ಪ್ರಸ್ತಾವನೆ:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಕಾರ್ಯಕ್ರಮಗಳಡಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ತೆಗೆದುಕೊಳ್ಳುವ ಕಾಮಗಾರಿಗಳನ್ನು ಪರಿಶೀಲಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳಲು ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಸೇವೆಗೆ ಅರ್ಹ ಎಮ್‌ಪ್ಯಾನಲ್(Empanel) ಮಾಡಿಕೊಳ್ಳುವ ಅಗತ್ಯತೆ ಇದೆ. ಮೇಲೆ ಓದಲಾದ ನಡವಳಿಯ ದಿನಾಂಕ: 07.11.2013ರಲ್ಲಿ ರಾಜ್ಯ ಗುಣ ನಿಯಂತ್ರಣ ಮಾನಿಟರ್ ಸೇವೆಗೆ 9 ಮಂದಿ ಅರ್ಹತೆ ಹೊಂದಿರುವ ನಿವೃತ್ತ ಮುಖ್ಯ/ಅಧೀಕ್ಷಕ ಇಂಜಿನೀಯರ್‌ಗಳ ಸೇವೆ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್ ಸೇವೆಗೆ 16 ಮಂದಿ ಅರ್ಹತೆ ಹೊಂದಿರುವ ನಿವೃತ್ತ ಕಾರ್ಯಕಾರಿ ಅಭಿಯಂತರರನ್ನು ಎಮ್‌ಪ್ಯಾನಲ್(Empanel) ಮಾಡಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಕರು ಗೌರವಧನ ಪ್ರವಾಸ ಭತ್ಯೆ ಹಾಗೂ ಮತ್ತಿತರ ಭತ್ಯೆಗಳಿಗೆ ಅರ್ಹರಿದ್ದು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯು ಈ ಸಂಬಂಧ ಶಿಫಾರಸ್ಸು ಮಾಡಿರುವಂತೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಎಮ್‌ಪ್ಯಾನಲ್(Empanel) ಆಗಿರುವ ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರುಗಳಿಗೂ ಸಹ ಸದರಿ ಸೌಲಭ್ಯಗಳನ್ನು ಅರ್ಹರಾಗಿ ಪಡೆಯಲು ಅರ್ಹರಾಗುವರೆಂದು ತೀರ್ಮಾನಿಸಲಾಗಿದೆ. ಆದ್ದರಿಂದ ಈ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/03/ಉಖಾಯೋ/2013 ಬೆಂಗಳೂರು. ದಿನಾಂಕ: 16.11.2013

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಕಾರ್ಯಕ್ರಮಗಳಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ, ನಿರ್ಮಲ್ ಭಾರತ್ ಅಭಿಯಾನ, ಸುವರ್ಣಗ್ರಾಮೋದಯ, ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ, ಹಿಂದುಳಿದ ಪ್ರಾಂತೀಯ ಪ್ರದೇಶಗಳ ಅನುದಾನದ ನಿಧಿ, (BRGF) ಇತ್ಯಾದಿ ಕಾರ್ಯಕ್ರಮಗಳಿಗಾಗಿ ಅನುಬಂಧ (ಅ) ನಲ್ಲಿ ನಮೂದಿಸಿದಂತೆ, ರಾಜ್ಯ ಗುಣ ನಿಯಂತ್ರಣ ಮಾನಿಟರ್ ಸೇವೆಗೆ ಅರ್ಹತೆ ಹೊಂದಿರುವ 9 ಮಂದಿ ನಿವೃತ್ತ ಮುಖ್ಯ/ಅಧೀಕ್ಷಕ ಅಭಿಯಂತರರನ್ನು ಹಾಗೂ ಅನುಬಂಧ (ಆ) ನಲ್ಲಿ ನಮೂದಿಸಿದಂತೆ ಜಿಲ್ಲಾ ಗುಣ ನಿಯಂತ್ರಣ ಮಾನಿಟರ್ ಸೇವೆಗೆ ಅರ್ಹತೆ ಹೊಂದಿರುವ 16 ಮಂದಿ ನಿವೃತ್ತ ಕಾರ್ಯಕಾರಿ ಅಭಿಯಂತರರನ್ನು ಎಮ್‌ಪ್ಯಾನಲ್(Empanel) ಮಾಡಿ ಆದೇಶಿಸಿದೆ ಮತ್ತು ಈ ಕೆಳಕಂಡ ಷರತ್ತುಗಳ ಅನುಪಾಲನೆಗೆ ಒಳಪಟ್ಟಿದೆ:

1. ಈ ಎಮ್‌ಪ್ಯಾನಲ್‌ಮೆಂಟ್(Empanelment) ಪೂರ್ಣವಾಗಿ ತಾತ್ಕಲಿಕವಾಗಿದ್ದು, ಅವರ ಕಾರ್ಯನಿರ್ವಹಣೆಯು ಮೌಲ್ಯ ಮಾಪನಕ್ಕೆ ಒಳಪಟ್ಟಿರುತ್ತದೆ.
2. ಗುಣ ನಿಯಂತ್ರಣ ಮಾನಿಟರ್‌ಗಳು ಪ್ರತಿ ಮಾಹೆ ಸುಮಾರು 8 ರಿಂದ 10 ದಿನಗಳವರೆಗೆ ನಿಯೋಜಿತ ಜಿಲ್ಲೆಗಳಿಗೆ ತೆರಳಿ ಕಾಮಗಾರಿಗಳನ್ನು ಮಾರ್ಗಸೂಚಿಯಂತೆ ಪರಿವೀಕ್ಷಿಸಿ ನಿಗದಿತ ನಮೂನೆಯಲ್ಲಿ ವರದಿ ಸಲ್ಲಿಸಬೇಕಾಗಿರುತ್ತದೆ.
3. ಗುಣ ನಿಯಂತ್ರಣ ಮಾನಿಟರ್‌ಗಳು 70 ವರ್ಷ ತುಂಬುವವರೆಗೂ ಕಾರ್ಯನಿರ್ವಹಿಸಬಹುದಾಗಿರುತ್ತದೆ. ಗುಣ ನಿಯಂತ್ರಣ ಮಾನಿಟರ್‌ಗಳ ಪರಿವೀಕ್ಷಣಾ ವರದಿಗಳನ್ನು 6 ತಿಂಗಳಿಗೊಮ್ಮೆ ಮೌಲ್ಯಮಾಪನ ನಡೆಸಲಾಗುವುದು.
4. ಗರಿಷ್ಠ ವಯೋಮಿತಿ ಮೀರಿದ ನಂತರ ಅಥವಾ ಅಸಮರ್ಪಕ ಕಾರ್ಯನಿರ್ವಹಣೆ ಕಂಡುಬಂದಲ್ಲಿ ಅಂತಹ ಮಾನಿಟರ್‌ಗಳನ್ನು ಪ್ಯಾನಲ್‌ನಿಂದ ಕೈ ಬಿಡಲಾಗುವುದು.
5. ಗುಣ ನಿಯಂತ್ರಣ ಮಾನಿಟರ್‌ಗಳಿಗೆ ಗೌರವಧನ/ಪರಿವೀಕ್ಷಿಸಿದ/ಸಭೆಗೆ ಹಾಜರಾದ ದಿನ ಒಂದಕ್ಕೆ ರೂ. 2500/– ದಿನ ಭತ್ಯೆ ರೂ. 250/– ಪ್ರಾಸಂಗಿಕ/ಆಕಸ್ಮಿಕ ವೆಚ್ಚ ರೂ. 250/– ವರದಿಕರೀಸಿದ ಭತ್ಯೆ ರೂ. 250/– ಹಾಗೂ ವಾಸ್ತವಿಕ ಪ್ರಯಾಣದ ದರವನ್ನು ನೀಡಲಾಗುವುದು.
6. ಇಲಾಖಾವತಿಯಿಂದ ವಹಿಸುವ ಇನ್ನಿತರೆ ಕೆಲಸಗಳನ್ನು ನಿರ್ವಹಿಸುವುದು.

ಈ ಸಂಬಂಧದ ವೆಚ್ಚವನ್ನು ಸಂಬಂಧಿಸಿದ ಯೋಜನೆಗಳ ಆಡಳಿತಾತ್ಮಕ ವೆಚ್ಚದಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಸಿ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
(ಸೇವೆಗಳು– ಎ ಶಾಖೆ)

ಗೆ,

1. ಮಹಾಲೇಖಪಾಲಕರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲಕರು (ಆಡಿಟ್) ಕರ್ನಾಟಕ, ಬೆಂಗಳೂರು.
3. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ.
4. ಮುಖ್ಯ ಕಾರ್ಯದರ್ಶಿ ಕರ್ನಾಟಕ ಸರ್ಕಾರ ವಿಧಾನಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
5. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ವಿಧಾನಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ
6. ಮುಖ್ಯ ಕಾರ್ಯಚರಣಾಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರ ಆಪ್ತ ಕಾರ್ಯದರ್ಶಿಗಳಿಗೆ.
8. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
9. ನಿರ್ದೇಶಕರು (ಅರಣ್ಯ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
10. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತಾ ಮಹಲ್ ರಸ್ತೆ, ಮೈಸೂರು.
11. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
12. ರಾಜ್ಯದ ಸಂಬಂಧಿಸಿದ ಎಲ್ಲಾ ಓಂಬಡ್ಸ್‌ಮನ್‌ಗಳಿಗೆ
13. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
14. ಜಂಟಿ ನಿರ್ದೇಶಕರು (ತಾಂತ್ರಿಕ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
15. ಜಂಟಿ ನಿರ್ದೇಶಕರು (ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
16. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
17. ಆಯುಕ್ತರು, ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಇವರ ಆಪ್ತ ಸಹಾಯಕರು.
18. ಸಹಾಯಕ ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
19. ಸಂಬಂಧಿಸಿದ ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳಿಗೆ
20. M/s Effia Technologies, ಅವರಿಗೆ www.end2endsolutions.com ನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.
21. ಶ್ರೀ. ಶ್ರೀನಿವಾಸ ಮಾರಂಗಪ್ಪನವರ್, ವಿಶ್ಲೇಷಕರು ಗಣಕಕೋಶ ಇವರ ಮಾಹಿತಿಗಾಗಿ ಹಾಗೂ ಸದರಿ ಮಾಹಿತಿಯನ್ನು ಇಲಾಖಾ ಅಂತರ್‌ಜಾಲದಲ್ಲಿ ಪ್ರಕಟಿಸಲು ಕೋರಿದೆ.
22. ಹೆಚ್ಚಿನ ಪ್ರತಿಗಳು/ಮಹಾ ಕಡತಕ್ಕೆ.

ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 3 ಉಖಾಯೋ 2013 ಬೆಂಗಳೂರು ದಿನಾಂಕ:16-11-2013

## ಅನುಬಂಧ – ಅ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಜಿಲ್ಲೆಗಳಿಗೆ ಅವರ ಹೆಸರಿನ ಮುಂದೆ ತೋರಿಸಿರುವಂತೆ ಎಂಪ್ಯಾನಲ್‌ಮೆಂಟ್ ಆಗಿರುವ ರಾಜ್ಯ ಗುಣ ನಿಯಂತ್ರಣ ಮಾನಿಟರ್ ಆಯಕೆಯ ಪಟ್ಟಿ (SQM) ಆಯ್ಕೆ ಮಾಡಿದ ಜಿಲ್ಲೆಯ ಹೆಸರು

| ಕ್ರ.ಸಂ | ಹೆಸರು | ಎಂಪ್ಯಾನಲ್‌ಮೆಂಟ್ ಮಾಡಿದ ಜಿಲ್ಲೆಯ ಹೆಸರು |
|---|---|---|
| 1 | **ಎಸ್.ನಟರಾಜ್,** S/O ಶ್ರೀ ಎಸ್.ವೆಂಕಟಪ್ಪ, ನಂ.8. III ಕ್ರಾಸ್, ತುಮಕೂರು-572 101 | 1.ಚಿತ್ರದುರ್ಗಾ<br>2.ಕೋಲಾರ<br>3.ಬೀದರ್<br>4.ಗುಲ್ಬರ್ಗಾ |
| 2 | **ಎಸ್.ನಾಗರಾಜಯ್ಯ** S/O ಹೆಚ್.ಶಿವಣ್ಣ, ನಂ.972 ಖಖ ಮೈನ್, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು. | 1.ತುಮಕೂರು<br>2.ಹಾಸನ<br>3.ಉತ್ತರ ಕನ್ನಡ |
| 3 | **ಎಸ್.ಜಿ.ಲಕ್ಷ್ಮೀನಾರಾಯಣ** S/O ಗಂಗನರಸಯ್ಯ, ನಂ.36, 7ನೇ ಕ್ರಾಸ್, 1ನೇ ಮುಖ್ಯ ರಸ್ತೆ, ಶಕ್ತಿ ಗಣಪತಿನಗರ, ಬಸವೇಶ್ವರನಗರ, ಬೆಂಗಳೂರು-79. | 1.ಮೈಸೂರು<br>2.ಕೊಡಗು<br>3.ರಾಯಚೂರು |
| 4 | **ದೊಡ್ಡಚೌಡಪ್ಪ** S/O ಲೇಟ್ ಮುನಿವೆಂಕಟಪ್ಪ, #585, 10ನೇ ಮುಖ್ಯ ರಸ್ತೆ, 6ನೇ ಅಡ್ಡ ರಸ್ತೆ, HAL III ಸ್ಟೇಜ್, ಬೆಂಗಳೂರು -560075. | 1.ಯಾದಗಿರಿ<br>2.ಮಂಡ್ಯ<br>3.ಬಿಜಾಪುರ |
| 5 | **ಮಹಂತೇಶ್ ಎ.ಅಮರ್‌ಶೆಟ್ಟಿ** S/O ಆಡಿವೆಪ್ಪ, #528, 1 ನೇ ಕ್ರಾಸ್, 3ನೇ ಸ್ಟೇಜ್, 4ನೇ ಬ್ಲಾಕ್, ಬಸವೇಶ್ವರ ನಗರ, ಬೆಂಗಳೂರು-79 | 1.ಚಾಮರಾಜನಗರ<br>2.ಚಿಕ್ಕಬಳ್ಳಾಪುರ<br>3.ಬಾಗಲಕೋಟೆ |
| 6 | **ಎಂ.ಎಸ್.ಶೇಖರಪ್ಪ** ಬಿನ್ ಎಂ. ನಿಂಗಪ್ಪ, ಮೈಲಾರ ಲಿಂಗೇಶ್ವರ ನಿಲಯ, 1ನೇ ಅಡ್ಡ ರಸ್ತೆ, ರಾಜೇಂದ್ರ ನಗರ, ಲಕ್ಷ್ಮಿ ಟಾಕೀಸ್ ಹತ್ತಿರ, ಶಿವಮೊಗ್ಗ. | 1.ಚಿಕ್ಕಮಗಳೂರು<br>2.ದಾವಣಗೆರೆ<br>3.ಉಡುಪಿ<br>4.ದಕ್ಷಿಣ ಕನ್ನಡ |
| 7 | **ಪಿ.ಎಲ್.ಅಶೋಕ್ ಕುಮಾರ್ ಗುಪ್ತ,** #28/25, 2ನೇ ಕ್ರಾಸ್, ISEC ಮೈನ್ ರೋಡ್, ನಾಗರಬಾವಿ, ಬೆಂಗಳೂರು -560072. | 1.ಬೆಂಗಳೂರು ಗ್ರಾಮೀಣ<br>2.ರಾಮನಗರ<br>3.ಶಿವಮೊಗ್ಗ |
| 8 | **ಬಸವರಾಜು ಮಳಿಮಠ್,** #2035/242, 12ನೇ ಅಡ್ಡ ರಸ್ತೆ, ಆಂಜನೇಯ ಬಡಾವಣೆ, ದಾವಣಗೆರೆ -577004. | 1.ಬಳ್ಳಾರಿ<br>2.ಕೊಪ್ಪಳ<br>3.ಗದಗ<br>4.ಹಾವೇರಿ |
| 9 | **ಸುಲ್ತಾನ್ ಷರೀಫ್,** S/O ಲೇಟ್ ಮೇಜರ್ ಎಸ್.ದಾವುದ್, # 122, FIC ಮೈನ್ ರೋಡ್ ಕ್ರಾಸ್, 4ನೇ ಕ್ರಾಸ್, ಜನ್ನಲ್-ಮನ್ಸಿ, ವಿಜಿನಾಪುರ, ಬೆಂಗಳೂರು. | 1.ಬೆಂಗಳೂರು ನಗರ<br>2.ಧಾರವಾಡ<br>3.ಬೆಳಗಾಂ |

(ಹೆಚ್.ಸಿ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
(ಸೇವೆಗಳು-ಎ ಶಾಖೆ)

ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 3 ಉಖಾಯೋ 2013 ಬೆಂಗಳೂರು ದಿನಾಂಕ:16–11–2013

## ಅನುಬಂಧ–ಆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಜಿಲ್ಲೆಗಳಿಗೆ ಅವರ ಹೆಸರಿನ ಮುಂದೆ ತೋರಿಸಿರುವಂತೆ ಎಂಪ್ಯಾನಲ್‌ಮೆಂಟ್ ಆಗಿರುವ ಜಿಲ್ಲಾ ಗುಣ ನಿಯಂತ್ರಣ ಮಾನಿಟರ್ ಆಯ್ಕೆಯ ಪಟ್ಟಿ (DQM) ಆಯ್ಕೆ ಮಾಡಿದ ಜಿಲ್ಲೆಯ ಹೆಸರು

| ಕ್ರ.ಸಂ | ಹೆಸರು | ಎಂಪ್ಯಾನಲ್‌ಮೆಂಟ್ ಮಾಡಿದ ಜಿಲ್ಲೆಯ ಹೆಸರು |
|---|---|---|
| 1 | ಆರ್.ಗುರುಲಿಂಗಸ್ವಾಮಿ, "ರಾಮರತ್ನ" 5ನೇ ತಿರುವು, ಬಸವನಗುಡಿ, ಶಿಬಮೊಗ್ಗ –577 201. | 1.ಉತ್ತರ ಕನ್ನಡ<br>2.ಉಡುಪಿ |
| 2 | ಶ್ರೀ ಶೈಲಾ ಸಗೇರಪ್ಪ ಜಂಬಗಿ, #72. "ಮಾರುತಿ" 4ನೇ ಅಡ್ಡ ರಸ್ತೆ, ಶ್ರೀಪಾದನಗರ, ಧಾರವಾಡ–580 001. | 1.ಕೋಲಾರ<br>2.ದಾವಣಗೆರೆ |
| 3 | ಎಸ್.ಗೋಪಾಲ್, #204, 2ನೇ ಮೈನ್, ಟೀಚರ್ಸ್ ಲೇಔಟ್, ನಾಗರಬಾವಿ, 1 ನೇ ಸ್ಟೇಜ್, ಬೆಂಗಳೂರು–72 | 1.ತುಮಕೂರು |
| 4 | ಮಹೇಶ್ ಮುಧೋಳ್, ಶ್ರೀ ನಂದಿ, ನಂ.550/62 & 63, ಭಾಗ್ಯಲಕ್ಷ್ಮಿ ನಗರ, ಶಿರೂರ ಪಾರ್ಕ, ಹುಬ್ಬಳ್ಳಿ –580 031, ಜಿ: ಧಾರವಾಡ. | 1.ಬಾಗಲಕೋಟೆ<br>2.ಬಿಜಾಪುರ |
| 5 | ವೀರಭದ್ರಪ್ಪ ವಿ.ಶೀರಿ, ನಂ.44. ಪದ್ಮರಾಜ ನಗರ, 2ನೇ ಮುಖ್ಯ ರಸ್ತೆ, ಗೋಕುಲ ರಸ್ತೆ, ಹುಬ್ಬಳ್ಳಿ –580030. | 1.ಹಾಸನ<br>2.ದಾರವಾಡ |
| 6 | ಕೆ.ರವಿಕುಮಾರ್, # 139, 5ನೇ ಕ್ರಾಸ್, ಗಾಂಧಿನಗರ, ಬೆಂಗಳೂರು –560009 | 1.ಗದಗ<br>2.ಯಾದಗಿರಿ |
| 7 | ಸುಭಾಷ್ ಚಂದ್ರ ಜೋಡಳ್ಳಿ, #56, 2ನೇ ಕ್ರಾಸ್, ರಾಧಾಕೃಷ್ಣ ನಗರ, ಧಾರವಾಡ – 58003. | 1.ಬಳ್ಳಾರಿ<br>2.ಕೊಪ್ಪಳ |
| 8 | ಟಿ.ಚಂಗಲರಾಯ ಗೌಡ, #22, ಗುರುಕೃಪ, 8ನೇ ಕ್ರಾಸ್, 13ನೇ ವಾರ್ಡ್, ಜಯನಗರ, ಕೋಲಾರ. | 1.ಚಿಕ್ಕಬಳ್ಳಾಪುರ<br>2.ಗುಲ್ಬರ್ಗಾ |
| 9 | ಹೆಚ್.ದೇವರಾಜು, #45, 1ನೇ ಫ್ಲೋರ್, 5ನೇ ಕ್ರಾಸ್, ಪಾಪಮ್ಮ ಲೇಔಟ್, ಪೊಲೀಸ್ ಸ್ಟೇಷನ್ ಹಿಂಭಾಗ, ರಾಮಮೂರ್ತಿ ನಗರ, ಬೆಂಗಳೂರು–560016. | 1.ರಾಮನಗರ<br>2.ಶಿವಮೊಗ್ಗ |
| 10 | ಬಿ.ಎಸ್.ಕುಮಾರ್, #1207, 2ನೇ ಕ್ರಾಸ್, 4ನೇ ಹಂತ, ಟಿ.ಕೆ.ಲೇಔಟ್, ಮೈಸೂರು–570023. | 1.ಕೊಡಗು<br>2.ಚಾಮರಾಜನಗರ |
| 11 | ಜಿ.ಎಸ್.ನಾರಾಯಣ ಮೂರ್ತಿ, ಫ್ಲಾಟ್ ನಂ.102, ಕ್ಲಾಸಿಕ್ ಕ್ರಸ್ಟಲ್ ಅಪಾರ್ಟಮೆಂಟ್, 36 ನೇ ಮುಖ್ಯ ರಸ್ತೆ, 3ನೇ ಕ್ರಾಸ್, ಸೋಮೇಶ್ವರ ದೇವಸ್ಥಾನದ ಹತ್ತಿರ, ಬಿ.ಟಿ.ಎಂ. 1ನೇ ಹಂತ, ಬೆಂಗಳೂರು–560068. | 1.ಬೆಂಗಳೂರು ಗ್ರಾಮೀಣ<br>2.ಬೆಂಗಳೂರು ನಗರ |

| | | |
|---|---|---|
| 12 | **ಮಂಜುನಾಥ ಕೇಶಪ್ಪ ಜಂತಲಿ,** - "ಶ್ರೀನಿಧಿ" ನಿಲಯ, ದೇವತಾರಾ ಅಪಾರ್ಟ್‌ಮೆಂಟ್ ಹತ್ತಿರ, ಸರಸ್ವತಿಪುರ, ಕಲಘಟಗಿ ರಸ್ತೆ, ಧಾರವಾಡ-580 002 | 1.ಬೆಳಗಾಂ |
| 13 | **ಪ್ರಕಾಶ್ ಯಲ್ಲೇರಿ,** #1-5/17/1, ಗೋಮತಿ ಅಪಾರ್ಟ್‌ಮೆಂಟ್, ಖುಬಾಪ್ಲಾಟ್, ಗಾರ್ಡನ್ ರೋಡ್, ಗುಲ್ಬರ್ಗಾ-585102. | 1.ಬೀದರ್<br>2.ರಾಯಚೂರು |
| 14 | **ಹೆಚ್.ಎಸ್.ರಾಮಕೃಷ್ಣರಾವ್,** ವಾರ್ಡ ನಂ.3, ಮನೆ ನಂ.245. "ಡಿ" ಕ್ರಾಸ್, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ. | 1.ಮಂಡ್ಯ<br>2.ಮೈಸೂರು |
| 15 | **ಕೆ.ಮಂಜುನಾಥ,** "ಸಮೃದ್ಧಿ" ಗುಂಡಪ್ಪ ಶೆಡ್ ಮುಖ್ಯ ರಸ್ತೆ, ಶಿವಮೊಗ್ಗ-577201. | 1.ಚಿಕ್ಕಬಳ್ಳಾಪುರ<br>2.ದಕ್ಷಿಣ ಕನ್ನಡ |
| 16 | **ಜಿ.ಹೆಚ್.ಗೋವಿಂದಪ್ಪ,** # 151/2009, ರಂಗನಾಥ ನಗರ, ದಾವಣಗೆರೆ. | 1.ಚಿತ್ರದುರ್ಗ<br>2.ಹಾವೇರಿ |

(ಹೆಚ್.ಸಿ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
(ಸೇವೆಗಳು-ಎ ಶಾಖೆ)